# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ

## ಸೆಷನ್ಸ್ ಕೇಸ್ ನಂ. 24/2015

**ದೋ.ಸಾ. : 17 ಪ್ರಾ.ಸಾ. : 11**

ಸಾಕ್ಷಿಯ ಹೆಸರು : ದಾದಾಪಿರ ಗೌಸ
ತಂದೆಯ ಹೆಸರು : ಮೊಹಿದ್ದಿನ್ ಬೇಪಾರಿ
ವಯಸ್ಸು : 59 ವರ್ಷ
ಉದ್ಯೋಗ : ಕೂಲಿ
ವಾಸ : ಹುಬ್ಬಳ್ಳಿ

**ದಿನಾಂಕಃ 10-07-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ಚಾಸಾ-18 ನನ್ನ ಹೆಂಡತಿ . ಚಾಸಾ-16 ನನ್ನ ಹೆಂಡತಿಯ ಅಣ್ಣ . ಚಾಸಾ-1 ನನ್ನ ಅಳಿಯನಾದ ಚಾಸಾ-21 ರವರ ಅಣ್ಣನಾಗಿರುತ್ತಾನೆ . ನನಗೆ ಒಟ್ಟು 4 ಜನ ಮಕ್ಕಳು . ನನ್ನ ಮೊದಲನೇ ಮಗಳ ಹೆಸರು ಶಬ್ರಿನ್ . ಅವಳು ಈಗ ಮೃತಪಟ್ಟಿದ್ದಾಳೆ . ನನ್ನ 2 ನೇ ಮಗಳು (ಚಾಸಾ-22) ಆಫ್ರಿನ್ ಗೆ ಚಾಸಾ-21 ರವರ ಜೊತೆ ಮದುವೆ ಮಾಡಿರುತ್ತೇನೆ. ಚಾಸಾ-16 ರವರ ಮನೆ ಯಲ್ಲಾಪುರದ ನೂತನ ನಗರದಲ್ಲಿ ಇದೆ . ನನ್ನ ಮಗಳು ಶಬ್ರಿನ್ ಮದುವೆ ಚಾಸಾ-19 ಜೊತೆ ಆಗಿತ್ತು . ಅವರ ಮದುವೆಯ ಮಧ್ಯಸ್ಥಿಕೆಯನ್ನು ಚಾಸಾ-16 ಮಾಡಿದ್ದರು . ಅವರ ಮದುವೆ ಚಾಸಾ-16 ರವರ ಮನೆಯಲ್ಲಿ ನಡೆಯಿತು . ನನ್ನ ಅಳಿಯನಿಗೆ ಅವನನ್ನು ಸೇರಿಸಿ ನಾಲ್ಕು ಜನ ಸಹೋದರರು. ಚಾಸಾ-8 ಚಾಸಾ-19 ರವರ ಅಮ್ಮ . ನನ್ನ ಅಳಿಯ ಸೇರಿ ಅವನ ಎಲ್ಲಾ ಸಹೋದರರು ಹೊರ ದೇಶದಲ್ಲಿ ಕೆಲಸ ಮಾಡುತ್ತಿದ್ದರು . ನನ್ನ ಮಗಳು ಅವರಲ್ಲಿ ಕೊನೆಯವನ ಹೆಂಡತಿ ಆಗಿದ್ದಳು . ನನ್ನ ಮಗಳ ಜೊತೆ ಮದುವೆ ಆದ ನಂತರ ನನ್ನ ಅಳಿಯ ಚಾಸಾ-19 ಹೊರ ದೇಶಕ್ಕೆ ಹೋದ . ಚಾಸಾ-8 ರವರ ಮನೆಯಲ್ಲಿ ಮೂರು ಜನ ಸೊಸೆಯಂದಿರು ಇದ್ದರು . ಚಾಸಾ-8 ರವರ 3 ನೇ ಸೊಸೆ ಹೊರ ದೇಶದಲ್ಲಿ ಇದ್ದಳು . ನನ್ನ ಮಗಳು ಮೃತಪಟ್ಟಾಗ ಆಕೆಗೆ ಒಬ್ಬ ಐದು ವರ್ಷದ ಮಗ ಮತ್ತು ಇನ್ನೊಂದು ಎರಡು ವರ್ಷದ ಮಗಳು ಇದ್ದರು . ಚಾಸಾ-8 ರವರ ಮನೆಯಲ್ಲಿ ಮೂರು ಜನ ಸೊಸೆಯಂದಿರು ಬೇರೆ ಬೇರೆ ಕೋಣೆಗಳಲ್ಲಿ ವಾಸ ಇದ್ದರು. ನನ್ನ ಮಗಳು ಅವರ ಮನೆಯಲ್ಲಿ ಮೇಲಿನ ಕೋಣೆಯಲ್ಲಿ ವಾಸ

ಇದ್ದಳು . ನ್ಯಾಯಾಲಯದಲ್ಲಿರುವ ಆರೋಪಿಯನ್ನು ಗುರುತಿಸುತ್ತೇನೆ . ಆಕೆ ಹೆಸರು ಶಬೀನಾ . ಆಕೆ ಚಾಸಾ–8 ರವರ ಮೊದಲನೇ ಸೊಸೆ . ಆರೋಪಿ ನನ್ನ ಮಗಳು ಶಬ್ರಿನಾ ಜೊತೆ ಜಗಳ ಮಾಡುತ್ತಿದ್ದಳು . ಮನೆ ಕಟ್ಟಬೇಕಾದರೆ ಮೃತಳ ಗಂಡ ಕಡಿಮೆ ಹಣ ಕೊಟ್ಟಿದ್ದಾನೆ ಎಂದು ಆರೋಪಿ ನನ್ನ ಮಗಳು ಶಬ್ರಿನ್ ಜೊತೆ ಜಗಳ ಮಾಡುತ್ತಿದ್ದಳು . ಆ ವಿಷಯವನ್ನು ನನ್ನ ಮಗಳು ಶಬ್ರಿನ್ ನನ್ನ ಹೆಂಡತಿ ಬಳಿ ಹಾಗೂ ನನ್ನ ಬಳಿ ಇಬ್ಬರ ಬಳಿಯೂ ಹೇಳುತ್ತಿದ್ದಳು . ಅದಕ್ಕೆ ನಾವು ಆಕೆಗೆ ಆಕೆಯ ಗಂಡ ಬರುವ ತನಕ ಸಂಬಾಳಿಸಿಕೊಂಡು ಇರುವಂತೆ ಹೇಳಿದ್ದೆವು . ಆಕೆಯ ಗಂಡ ವಾಪಸ್ಸು ಬಂದ ಮೇಲೆ ಬೇರೆ ಮನೆ ಮಾಡಿಕೊಂಡು ಉಳಿಯಬಹುದು ಎಂದು ಹೇಳಿದ್ದೆವು .

2. ನಾನು ಮತ್ತು ನನ್ನ ಹೆಂಡತಿ ನನ್ನ ಮಗಳು ಶಬ್ರಿನ್ ಮತ್ತು ಆಕೆಯ ಮಕ್ಕಳನ್ನು ನೋಡಲು ಹೊನ್ನಾವರಕ್ಕೆ ಆಕೆಯ ಮನೆಗೆ ಬರುತ್ತಿದ್ದೆವು . ಅಲ್ಲಿಗೆ ಹೋದಾಗ ಸಹ ನನ್ನ ಮಗಳು ಆರೋಪಿ ಜೊತೆ ಜಗಳ ಆಗುತ್ತಿದ್ದ ಬಗ್ಗೆ ಹೇಳುತ್ತಿದ್ದಳು . ಆ ವಿಚಾರವನ್ನು ನಾವು ಆಕೆಯ ಅತ್ತೆ ಚಾಸಾ–8 ರವರಿಗೆ ಹೇಳಿದ್ದೆವು . ಅಲ್ಲದೇ ನಮ್ಮ ಅಳಿಯ ಅಂದರೆ ಶಬ್ರಿನ್ ಳ ಗಂಡ ಚಾಸಾ–19 ಗೆ ಸಹ ದೂರವಾಣಿ ಮೂಲಕ ಹೇಳಿದ್ದೆವು . ಚಾಸಾ–8 ರವರಿಗೆ ನಾವು ಹೇಳಿದಾಗ ಆಕೆ ಚಾಸಾ–19 ರವರಿಗೆ ಆ ವಿಚಾರವನ್ನು ತಿಳಿಸುವುದಾಗಿ ಹೇಳುತ್ತಿದ್ದಳು . ಶಬ್ರಿನ್ ಸಾಯುವುದಕ್ಕೆ ಮೊದಲು ಜುಲೈ 2014 ರಲ್ಲಿ ಆರೋಪಿ ವಿರುದ್ಧ ಹೊನ್ನಾವರ ಠಾಣೆಯಲ್ಲಿ ದೂರನ್ನು ಕೊಟ್ಟಿದ್ದಳು . ದೂರನ್ನು ಕೊಟ್ಟ ಮೇಲೆ ಪೊಲೀಸ್ ನವರು ಬಂದು ಆರೋಪಿಗೆ ತಿಳುವಳಿಕೆ ನೀಡಿ ಹೋಗಿದ್ದರು . ಆ ನಂತರ ಅಕ್ಟೋಬರ್ 2014 ರಲ್ಲಿ ನನ್ನ ಮಗಳು ನಮ್ಮ ಮನೆಗೆ ಬಂದಿದ್ದಳು . ಆಗಲೂ ಆರೋಪಿ ಪುನಃ ತನ್ನ ಜೊತೆ ಜಗಳ ಮಾಡುತ್ತಿದ್ದಾಳೆ ಎಂದು ಹೇಳಿದ್ದಳು . ನಾವು ಸಹನೆಯಿಂದ ಇರುವಂತೆ ಆಕೆಗೆ ಹೇಳಿ ಕಳುಹಿಸಿದ್ದೆವು .

3. ದಿನಾಂಕ 11.02.2015 ರಂದು ನಾನು ಮತ್ತು ಚಾಸಾ–18 ಸೇರಿ ಯಲ್ಲಾಪುರಕ್ಕೆ ಚಾಸಾ–16 ರವರ ಮನೆಗೆ ಬಂದಿದ್ದೆವು . ಆ ದಿನ ಬೆಳಿಗ್ಗೆ ಶಬ್ರಿನ್ ದೂರವಾಣಿ ಕರೆ ಮಾಡಿ ನನಗೆ ಆರೋಪಿ ಆಕೆಯೊಂದಿಗೆ ಜಗಳ ಮಾಡುತ್ತಿದ್ದಾಳೆ ಎಂದು ಹೇಳಿದ್ದಳು . ರಾತ್ರಿ 8.00 ರಿಂದ 8.30 ಗಂಟೆ ಸಮಯದಲ್ಲಿ ಚಾಸಾ–21 ರವರು ನಾವು ಯಲ್ಲಾಪುರದಲ್ಲಿ

ಇರಬೇಕಾದರೆ ನನ್ನ ಮಗಳು ಶಬ್ರಿನ್ ಗೆ ಆರೋಪಿ ಬೆಂಕಿ ಹಚ್ಚಿ ಸುಟ್ಟಿದ್ದಾಳೆ ನನ್ನ ಮಗಳು ಹೊನ್ನಾವರ ಆಸ್ಪತ್ರೆಯಲ್ಲಿ ಇದ್ದಾಳೆ ಎಂದು ಮತ್ತು ನನ್ನ ಮಗಳನ್ನು ಹುಬ್ಬಳ್ಳಿಯ ಕೆಎಂಸಿ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿರುವುದಾಗಿ ಹೇಳಿದರು . ನಂತರ ನನ್ನ ಮಗಳನ್ನು ತುರ್ತು ಚಿಕಿತ್ಸಾ ವಾಹನದಲ್ಲಿ ಹೊನ್ನಾವರದಿಂದ ಕರೆದುಕೊಂಡು ಯಲ್ಲಾಪುರ ಮಾರ್ಗವಾಗಿ ಬಂದರು . ಆಗ ನಾನು ಮತ್ತು ನನ್ನ ಹೆಂಡತಿ ಹಾಗೂ ನನ್ನ ಮೃತ ಮಗಳಾದ ಶಬ್ರಿನ್ ಳ ಇಬ್ಬರು ಮಕ್ಕಳು ಸದರಿ ತುರ್ತು ಚಿಕಿತ್ಸಾ ವಾಹನದಲ್ಲಿ ಯಲ್ಲಾಪುರದಿಂದ ಹುಬ್ಬಳ್ಳಿಯ ಕೆಎಂಸಿ ಆಸ್ಪತ್ರೆಗೆ ಹೋದೆವು . ಆ ದಿನ ರಾತ್ರಿ 2.00-2.30 ಗಂಟೆಗೆ ನನ್ನ ಮಗಳನ್ನು ಆ ಆಸ್ಪತ್ರೆಯಲ್ಲಿ ದಾಖಲು ಮಾಡಿದೆವು . ನನ್ನ ಮಗಳ ಹಣೆ , ತಲೆ ಮೇಲೆ , ಬೆನ್ನಿನ ಮೇಲೆ , ಬಲಗೈ , ಎಡಗೈ ಸುಟ್ಟಿತ್ತು . ನನ್ನ ಮಗಳು ತುರ್ತು ಚಿಕಿತ್ಸಾ ವಾಹನದಲ್ಲಿ ಆಕೆಯನ್ನು ಕರೆದುಕೊಂಡು ಹೋಗುವಾಗ ಮತ್ತು ಹುಬ್ಬಳ್ಳಿಯ ಕೆಎಂಸಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವಾಗ ಚೆನ್ನಾಗಿಯೇ ಮಾತನಾಡುತ್ತಿದ್ದಳು . ಆಕೆಗೆ ಹೇಗೆ ಬೆಂಕಿ ತಾಗಿತು ಎಂದು ನಾನು ಮತ್ತು ನನ್ನ ಹೆಂಡತಿ ಕೇಳಿದಾಗ ಆಕೆಯ ಮಾವನ ಮನೆಯಲ್ಲಿ ಹೊನ್ನಾವರದಲ್ಲಿ ಆಕೆ ವಾಸಿಸುತ್ತಿದ್ದ ಮಹಡಿಯ ಕೊಠಡಿಯಲ್ಲಿ ಆರೋಪಿ ಬಂದು ಸೀಮೆಎಣ್ಣೆಯನ್ನು ಆಕೆ ಮೇಲೆ ಹಾಕಿ ಬೆಂಕಿ ಕಡ್ಡಿ ಹಚ್ಚಿ ಆ ಕೊಠಡಿಯ ಬಾಗಿಲಿಗೆ ಚೀಲಕವನ್ನು ಹೊರಗಿನಿಂದ ಹಾಕಿಕೊಂಡು ಹೋಗಿದ್ದಾಳೆ ಎಂದು ನನ್ನ ಮಗಳು ಹೇಳಿದಳು .

4. ನಂತರ 2-3 ದಿನ ಬಿಟ್ಟು ದಿನಾಂಕ 14.02.2015 ರಂದು ಹೊನ್ನಾವರ ಠಾಣೆಯಿಂದ ಮಹಿಳಾ ಮತ್ತು ಪುರುಷ ಪೊಲೀಸ್ ನವರು ಹುಬ್ಬಳ್ಳಿಯ ಕೆಎಂಸಿ ಆಸ್ಪತ್ರೆಗೆ ಬಂದಿದ್ದರು . ಅವರು ಬಂದಾಗ ನಾನು , ವೈದ್ಯರು ನನ್ನ ಮಗಳ ಜೊತೆ ಇದ್ದೆವು . ಆಗ ನನ್ನ ಸಮಕ್ಷಮ ಮತ್ತು ವೈದ್ಯರ ಸಮಕ್ಷಮ ನನ್ನ ಮಗಳು ಶಬ್ರಿನ್ ಹೊನ್ನಾವರ ಠಾಣೆಯಿಂದ ಬಂದಿದ್ದ ಪೊಲೀಸ್ ನವರಿಗೆ ಹೇಳಿಕೆಯನ್ನು ನೀಡಿದಳು . ಆ ಹೇಳಿಕೆಗೆ ನಾನು ಸಹಿ ಮಾಡಿರುತ್ತೇನೆ. ಈಗ ನಾನು ಆ ಹೇಳಿಕೆಯನ್ನು ನೋಡಿರುತ್ತೇನೆ. ಅದರಲ್ಲಿ ನನ್ನ ರುಜು ಇದೆ ಎಂದು ಸಾಕ್ಷಿ ರುಜುವನ್ನು ಗುರುತಿಸಿದ್ದಾರೆ . ಆ ಹೇಳಿಕೆಯನ್ನು ನಿ.ಪಿ. 21 ಎಂದು ಗುರುತಿಸಲಾಯಿತು. ಅದರಲ್ಲಿ ಸಾಕ್ಷಿಯ ರುಜುವನ್ನು ನಿ.ಪಿ. 21(ಎ) ಎಂದು ಗುರುತಿಸಲಾಯಿತು. ಆ ಹೇಳಿಕೆಗೆ ನನ್ನ ಮಗಳ ಹೆಬ್ಬೆಟ್ಟಿನ ಗುರುತನ್ನು ಪೊಲೀಸ್ ನವರು ಪಡೆದರು . ನಂತರ ದಿನಾಂಕ 04.03.2015 ರಂದು ಹುಬ್ಬಳ್ಳಿಯ ಕೆಎಂಸಿ ಆಸ್ಪತ್ರೆಯಲ್ಲಿಯೇ ನನ್ನ ಮಗಳು ಮೃತಪಟ್ಟಳು . ಆಕೆಗೆ ಆಗಿದ್ದ ಸುಟ್ಟ

ಕಾರಣವೇ ಆಕೆ ಮೃತಪಟ್ಟಳು . ನನ್ನ ಮಗಳಿಗೆ ಉರ್ದು ಓದಲು ಬರೆಯಲು ಬರುತ್ತಿತ್ತು . ಕನ್ನಡ ಮಾತನಾಡುತ್ತಿದ್ದಳು . ನನ್ನ ಮಗಳಿಗೆ ಗ್ಲೂಕೋಜ್ ಸಲೈನ್ ಅನ್ನು ಬಲಗೈಗೆ ಡ್ರಿಪ್ ಮೂಲಕ ಹಸ್ತದ ಮೇಲ್ಭಾಗದಲ್ಲಿ ಹಾಕಿದ್ದರು . ಆದ್ದರಿಂದ ಆಕೆ ನೀಡಿದ ಹೇಳಿಕೆಗೆ ರುಜು ಪಡೆಯಲು ಆಗಿರುವುದಿಲ್ಲ. ಆಕೆಯ ಹೆಬ್ಬೆಟ್ಟಿನ ಗುರುತನ್ನು ಹೇಳಿಕೆಗೆ ಹಾಕಿಸಿಕೊಂಡಿದ್ದಾರೆ . ನಂತರ ಆಕೆ ಮೃತಪಟ್ಟ ಮೇಲೆ ಅದೇ ಆಸ್ಪತ್ರೆಯಲ್ಲಿ ಆಕೆಯ ಮರಣೋತ್ತರ ಪರೀಕ್ಷೆ ಮಾಡಿರುತ್ತಾರೆ . ಹುಬ್ಬಳ್ಳಿಯ ತಹಶೀಲ್ದಾರರವರು ಬಂದು ನನ್ನ ಮೃತ ಮಗಳ ಶವ ತನಿಖೆ ಪಂಚನಾಮೆ ಮಾಡಿದಾಗ ನಾನು ಹಾಜರು ಇದ್ದೆ. ಆಗ ನನ್ನ ಹೆಂಡತಿ ಸಹ ಹಾಜರು ಇದ್ದಳು ಮತ್ತು ತಹಶೀಲ್ದಾರರವರಿಗೆ ಹೇಳಿಕೆ ಕೊಟ್ಟಿದ್ದಾರೆ . ನಂತರ ನನ್ನ ಮಗಳ ಅಂತ್ಯಸಂಸ್ಕಾರವನ್ನು ಹುಬ್ಬಳ್ಳಿಯಲ್ಲಿ ನನ್ನ ಮನೆ ಇರುವುದರಿಂದ ಅಲ್ಲಿಯೇ ಮಾಡಿದೆ . ಆಗ ಆರೋಪಿ ಅಂತ್ಯಸಂಸ್ಕಾರಕ್ಕೆ ಬರಲಿಲ್ಲ. ನನ್ನ ಮಗಳ ಅತ್ತೆ ಅಂತ್ಯಸಂಸ್ಕಾರಕ್ಕೆ ಬಂದಿದ್ದಳು . ನನ್ನ ಅಳಿಯ ನನ್ನ ಮಗಳು ಮೃತಪಡುವುದಕ್ಕೆ 4-5 ದಿನ ಮೊದಲೇ ಹೊರದೇಶದಿಂದ ವಾಪಸ್ಸು ಬಂದ . ಅವನೂ ಸಹ ಅಂತ್ಯಕ್ರಿಯೆಯಲ್ಲಿ ಭಾಗವಹಿಸಿದ . ಈಗ ನನ್ನ ಅಳಿಯ ಬೇರೆ ಮದುವೆ ಆಗಿದ್ದಾನೆ . ಆರೋಪಿ ನನ್ನ ಮಗಳಿಗೆ ಸೀಮೆಎಣ್ಣೆ ಸುರಿದು ಬೆಂಕಿ ಹಚ್ಚಿ ಕೊಲೆ ಮಾಡಿದ್ದಾಳೆ . ನನ್ನ ಮಗಳು ಸಾಯುವ ತನಕ ಶಬೀನಾ ಸುಟ್ಟಳು ಶಬೀನಾ ಸುಟ್ಟಳು ಎಂದು ಹೇಳುತ್ತಿದ್ದಳು ಎಂದು ಸಾಕ್ಷಿ ನುಡಿದಿರುತ್ತಾರೆ . ನನ್ನ ಮಗಳಿಗೆ ಆರೋಪಿಯ ಕಿರಿಕಿರಿ ಬಿಟ್ಟರೆ ಬೇರೆ ಯಾವ ತೊಂದರೆ ಇರಲಿಲ್ಲ. ನನ್ನ ಮಗಳಿಗೆ ಆಕೆಯ ಮಾವನ ಮನೆಯಲ್ಲಿ ಆರೋಪಿ ಬಿಟ್ಟರೆ ಆಕೆ ವಿರುದ್ಧ ಬೇರೆ ಯಾರೂ ದ್ವೇಷ ಸಾಧನೆ ಮಾಡುತ್ತಿರಲಿಲ್ಲ. ನಾನು ಪೊಲೀಸ್ ನವರಿಗೆ ಹೇಳಿಕೆ ಕೊಟ್ಟಿದ್ದೇನೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಸ್ ಬಿ ಎಸ್ ರವರಿಂದ**

5. ನಾನು ಹುಬ್ಬಳ್ಳಿಯಿಂದ ಈ ದಿನ ಬಂದಿದ್ದೇನೆ. ನನಗೆ ನ್ಯಾಯಾಲಯಕ್ಕೆ ಹಾಜರಾಗಲು ಪೊಲೀಸ್ ನವರು ಸಮನ್ಸ್ ತಂದಿದ್ದರು . ಈ ದಿನ ಪೊಲೀಸ್ ನವರು ನನ್ನನ್ನು ಕರೆದುಕೊಂಡು ಬಂದಿರುವುದಿಲ್ಲ ನಾನೇ ಬಂದಿರುತ್ತೇನೆ. ನನ್ನ ಜೊತೆಯಲ್ಲಿ ಈ ದಿನ ನನ್ನ ಹೆಂಡತಿ ಸಹ ಬಂದಿದ್ದಾಳೆ . ನಾವು ಕಾರವಾರಕ್ಕೆ ನಿನ್ನೆ ಬಂದೆವು . ಈ ದಿನ ಬೆಳಿಗ್ಗೆ 10.00 ಗಂಟೆಗೆ ನ್ಯಾಯಾಲಯಕ್ಕೆ ಬಂದಿದ್ದೆವು . ನ್ಯಾಯಾಲಯಕ್ಕೆ ಬಂದ ಮೇಲೆ ನಾವು ಯಾರನ್ನೂ ಭೇಟಿ ಮಾಡಿರುವುದಿಲ್ಲ ನ್ಯಾಯಾಲಯದ ಹೊರಗಡೆ ಕುಳಿತಿದ್ದೆವು . ನಾವು ಈ ದಿನ ಅಭಿಯೋಜಕರ

ಕಚೇರಿಗೆ ಹೋಗಿದ್ದೆವು . ಅಭಿಯೋಜಕರು ನ್ಯಾಯಾಲಯದ ಮುಂದೆ ಯಾವ ರೀತಿ ಹೇಳಿಕೆ ಕೊಡಬೇಕು ಎಂದು ನಮಗೆ ಹೇಳಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನಾನು ಈ ಪ್ರಕರಣದ ಬಗ್ಗೆ ಹೊನ್ನಾವರದ ಪೊಲೀಸ್ ನವರಿಗೆ ಹೇಳಿಕೆ ಕೊಟ್ಟಿದ್ದೇನೆ. ನನ್ನ ಆ ಹೇಳಿಕೆಯನ್ನು ಪೊಲೀಸ್ ನವರು ನನಗೆ ಅದರಲ್ಲಿ ಏನು ಬರೆದಿದ್ದಾರೆ ಎಂದು ಓದಿ ಹೇಳಿಲ್ಲ.

6. ಘಟನೆಯಾದ ದಿನ ರಾತ್ರಿ 8.00 ಗಂಟೆಗೆ ದೂರವಾಣಿ ಕರೆ ಬಂದಿತ್ತು . ನನಗೆ ಚಾಸಾ-21 ದೂರವಾಣಿ ಕರೆ ಮಾಡಿದ್ದರು . ಘಟನೆ ಸಾಯಂಕಾಲ 7.35 ಕ್ಕೆ ಆಯಿತು ಎಂದು ಹೇಳಿದರು. ಚಾಸಾ-21 ರವರು ಚಂದಾವರದಲ್ಲಿ ವಾಸ ಇದ್ದಾರೆ . ಘಟನೆ ಸ್ಥಳದಿಂದ ಚಾಸಾ-21 ರವರ ಮನೆ 20 ಕಿ.ಮೀ. ದೂರದಲ್ಲಿ ಇದೆ . ಘಟನೆ ಬಗ್ಗೆ ಹೇಗೆ ಗೊತ್ತಾಯಿತು ಎಂದು ಚಾಸಾ-21 ರವರನ್ನು ನಾನು ಕೇಳಿದೆನಾ ಎಂದರೆ ಚಾಸಾ-21 ರವರಿಗೆ ಆರೋಪಿ ಮನೆಯಿಂದ ಅಂದರೆ ಚಾಸಾ-8 ರವರ ಮನೆಯಿಂದ ಕರೆ ಬಂದಿತ್ತು ಎಂದು ತಿಳಿಸಿದರು . ಮೃತಳ ಮನೆಗೆ ನಾನು ಹೋಗುವುದು ಬರುವುದು ಮಾಡುತ್ತಿದ್ದೆ ಎಂದರೆ ಹೌದು . ನಾನು ಒಬ್ಬನೇ ಸಹ ಹೋಗುತ್ತಿದ್ದೆ ಹಾಗೂ ನನ್ನ ಹೆಂಡತಿ ಸಹ ಜೊತೆಯಲ್ಲಿ ಬರುತ್ತಿದ್ದಳು . ನಾನು 3-4 ತಿಂಗಳಿಗೆ ಒಮ್ಮೆ ಹೋಗುತ್ತಿದ್ದೆ. ನನ್ನ ಮೃತ ಮಗಳು ಇದ್ದ ಮನೆಯಲ್ಲಿ ಇದ್ದ ಎಲ್ಲರ ಪರಿಚಯ ನನಗೆ ಇದೆ . ಅವರ ಜೊತೆ ನನಗೆ ಒಳ್ಳೆಯ ಸಂಬಂಧ ಇದೆ ಎಂದರೆ ಹೌದು . ನನ್ನ ಮೃತ ಮಗಳು ಶಬ್ರಿನ್ ಆ ಮನೆಯಲ್ಲಿ ಮೇಲ್ಮಹಡಿಯಲ್ಲಿ ಇದ್ದಳು . ಆರೋಪಿ ಆ ಮನೆಯಲ್ಲಿ ಇರುತ್ತಿರಲಿಲ್ಲ ಬೇರೆ ಇದ್ದಳು ಎಂದರೆ ಅದೇ ಮನೆಯಲ್ಲಿ ಕೆಳಗಡೆ ಆರೋಪಿ ವಾಸವಿದ್ದಳು .

7. ಘಟನೆ ಬಗ್ಗೆ ಗೊತ್ತಾದ ತಕ್ಷಣ ನಾನು ಹೊನ್ನಾವರಕ್ಕೆ ಹೋದೆ ಎಂದರೆ ಸರಿಯಲ್ಲ. ನಾನು ಯಲ್ಲಾಪುರದಲ್ಲಿಯೇ ಆ ಮಾರ್ಗದಲ್ಲಿಯೇ ನನ್ನ ಮಗಳನ್ನು ಕರೆ ತರುತ್ತಿದ್ದ ತುರ್ತು ಚಿಕಿತ್ಸಾ ವಾಹನ ಬರುತ್ತಿದ್ದ ಕಾರಣ ಕಾಯುತ್ತಿದ್ದೆ. ಯಲ್ಲಾಪುರಕ್ಕೆ ತುರ್ತು ಚಿಕಿತ್ಸಾ ವಾಹನ ರಾತ್ರಿ 12.30 ಗಂಟೆಗೆ ಬಂತು . ತುರ್ತು ಚಿಕಿತ್ಸಾ ವಾಹನದಲ್ಲಿ ನನ್ನ ಮಗಳು ಶಬ್ರಿನ್ ಗೆ ಸಲೈನ್ ಹಚ್ಚಿದ್ದರು ಎಂದರೆ ಸರಿಯಲ್ಲ. ಆಕೆಗೆ ಆಕ್ಸಿಜನ್ ಮಾಸ್ಕ್ ಹಾಕಿದ್ದರು . ಕೆಎಂಸಿ ಆಸ್ಪತ್ರೆಯಲ್ಲಿ ರಾತ್ರಿ 2.30 ರಿಂದ 3.00 ಗಂಟೆ ಸಮಯದಲ್ಲಿ ಆಕೆಯನ್ನು ದಾಖಲು ಮಾಡಿಕೊಂಡರು . ಆಕೆಗೆ ಯಾವ ವೈದ್ಯರು ಚಿಕಿತ್ಸೆ ನೀಡುತ್ತಿದ್ದರು ಎಂದು ಅವರ ಹೆಸರು ಗೊತ್ತಿಲ್ಲ. ನನ್ನ ಮಗಳನ್ನು 205 ನೇ ವಾರ್ಡ್ ನಲ್ಲಿ ಇಟ್ಟಿದ್ದರು ಅದು ಸುಟ್ಟ ಗಾಯದವರಿಗೆ

ಮೀಸಲು ಇದ್ದ ವಾರ್ಡ್ ಆಗಿತ್ತು . ಆಸ್ಪತ್ರೆಯಲ್ಲಿ ನಾನು , ನನ್ನ ಹೆಂಡತಿ , ನನ್ನ ಸಣ್ಣ ಮಗಳು ಆಫ್ರಿನ್ ಮತ್ತು ನನ್ನ 2 ನೇ ಅಳಿಯ ಚಾಸಾ-21 ಇದ್ದೆವು . ತುರ್ತು ಚಿಕಿತ್ಸಾ ವಾಹನದಲ್ಲಿ ಹೊನ್ನಾವರದಿಂದ ಬಂದಾಗ ನನ್ನ ಮಗಳು ಶಬ್ರಿನ್ ಜೊತೆ ನನ್ನ ಸಣ್ಣ ಮಗಳು ಆಫ್ರಿನ್ (ಚಾಸಾ-22) ಮತ್ತು ಅಳಿಯ (ಚಾಸಾ-21) ರವರು ಮಾತ್ರ ಇದ್ದರು . ಮೃತ ಶಬ್ರಿನ್‌ಳ ಅತ್ತೆ ಮಾವನ ಮನೆಯಿಂದ ಕೆಎಂಸಿ ಆಸ್ಪತ್ರೆಗೆ ಯಾರೂ ಬಂದಿರಲಿಲ್ಲ. ನನ್ನ ಮಗಳು ಶಬ್ರಿನ್ ಆಸ್ಪತ್ರೆಗೆ ದಾಖಲಾದಾಗ ಗಂಭೀರ ಸ್ಥಿತಿಯಲ್ಲಿ ಇದ್ದಳು ಎಂದರೆ ಸರಿಯಲ್ಲ. ಆಕೆ 22 ದಿನ ಜೀವಂತ ಇದ್ದಳು . ಶಬ್ರಿನ್‌ಳ ಗಂಡ ಆಕೆ ಮೃತಪಡುವುದಕ್ಕೆ ಆರು ದಿನ ಮೊದಲು ಬಂದ . ಆ ಸಮಯದಲ್ಲಿ ನನ್ನ ಮೃತ ಮಗಳ ಸ್ಥಿತಿ ಚೆನ್ನಾಗಿ ಇತ್ತು . ನನ್ನ ಅಳಿಯ ಕುವೈತ್ ನಲ್ಲಿ ಕೆಲಸ ಮಾಡುತ್ತಿದ್ದ . ಅವನಿಗೆ ಹಣಕ್ಕೆ ತೊಂದರೆ ಇರಲಿಲ್ಲ. ಹಾಗಿದ್ದರೆ ಏಕೆ ನನ್ನ ಮಗಳನ್ನು ಖಾಸಗಿ ಆಸ್ಪತ್ರೆಗೆ ಸೇರಿಸಿಲ್ಲ ಎಂದರೆ ನನ್ನ ಬಳಿ ಹಣ ಇರಲಿಲ್ಲ ನನ್ನ ಅಳಿಯ ಚಾಸಾ-19 ಬಂದ ಮೇಲೆ ನನ್ನ ಮಗಳು ಬೇರೆ ಆಸ್ಪತ್ರೆಗೆ ಕರೆದುಕೊಂಡು ಹೋಗುವ ಸ್ಥಿತಿಯಲ್ಲಿ ಇರಲಿಲ್ಲ. ಚಾಸಾ-19 ನನ್ನ ಮಗಳನ್ನು ಮಣಿಪಾಲ್ ಆಸ್ಪತ್ರೆಗೆ ಕರೆದುಕೊಂಡು ಹೋಗುವುದಾಗಿ ಹೇಳಿದ ಆದರೆ ಕೆಎಂಸಿ ಆಸ್ಪತ್ರೆಯಲ್ಲಿ ವೈದ್ಯರು ಕರೆದುಕೊಂಡು ಹೋಗುವುದು ಬೇಡ ಎಂದು ಹೇಳಿದರು . ನನ್ನ ಮಗಳಿಗೆ ಸೆಪ್ಟಿಕ್ ಆಗಿದೆ ಆದ್ದರಿಂದ ಕರೆದುಕೊಂಡು ಹೋಗುವುದು ಬೇಡಾ ಎಂದು ವೈದ್ಯರು ಹೇಳಿದರು .

8. ನನ್ನ ಮಗಳ ತಲೆಗೆ ಎಲ್ಲಾ ಸುಟ್ಟ ಗಾಯ ಆಗಿದ್ದವು ಎಂದರೆ ಹೌದು . ನನ್ನ ಮಗಳ ಕೈ ಎಲ್ಲಾ ಸುಟ್ಟಿತ್ತು ಎಂದರೆ ಬಲಗೈ ಹಸ್ತ ಸುಟ್ಟಿರಲಿಲ್ಲ. ಎಡಗೈ ಹಸ್ತ ಸಹ ಸುಟ್ಟಿರಲಿಲ್ಲ. ಶಬ್ರಿನ್ ಆಸ್ಪತ್ರೆಯಲ್ಲಿ ಇದ್ದಾಗ ಆಕೆ ಜೊತೆ ಖಾಯಂ ಆಗಿ ನಾನು ಮತ್ತು ನನ್ನ ಹೆಂಡತಿ ಇರುತ್ತಿದ್ದೆವು. ನನ್ನ ಸಣ್ಣ ಮಗಳು ಚಾಸಾ-22 ಸಹ ಇರುತ್ತಿದ್ದಳು . ನನ್ನ ಮಗಳಿಗೆ ಸೆಪ್ಟಿಕ್ ಆಗಿದ್ದ ಕಾರಣ ಆಕೆಗೆ ಸರಿಯಾಗಿ ಮಾತನಾಡಲು ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಅವಳು ಚಲೋ ಮಾತನಾಡುತ್ತಿದ್ದಳು ಎಂದು ಸಾಕ್ಷಿ ನುಡಿದಿರುತ್ತಾರೆ . ಆಕೆಗೆ ಗಂಭೀರ ಸ್ವರೂಪದ ಗಾಯಗಳು ಆಗಿದ್ದ ಕಾರಣ ಆಕೆಗೆ ಸರಿಯಾಗಿ ಮಾತನಾಡಲು ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ಆಕೆ ಚೆನ್ನಾಗಿ ಮಾತನಾಡುತ್ತಿದ್ದಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕೆಎಂಸಿ ಆಸ್ಪತ್ರೆಯಲ್ಲಿ ನನ್ನ ಮಗಳು 22 ದಿನ ಒಳರೋಗಿಯಾಗಿ ಇದ್ದಳು . ದಿನಾಂಕ 14 ಅಥವಾ 16

ಫೆಬ್ರವರಿ 2015 ರಲ್ಲಿ ಹೊನ್ನಾವರ ಪೊಲೀಸ್ ನವರು ಬಂದು ನನ್ನ ಮಗಳ ಹೇಳಿಕೆಯನ್ನು ಆಸ್ಪತ್ರೆಯಲ್ಲಿ ಪಡೆದಿರುತ್ತಾರೆ . ಆ ಹೇಳಿಕೆಯನ್ನು ಪೊಲೀಸ್ ನವರು ಪಡೆದಾಗ ನಾನು , ನನ್ನ ಹೆಂಡತಿ , ನನ್ನ ಸೊಸೆ ಆಯಿಶಾ (ಚಾಸಾ-13) ಇದ್ದೆವು . ಪೊಲೀಸ್ ನವರ ಜೊತೆ ಯಾರು ಬಂದಿದ್ದರು ಎಂದರೆ ಮಹಿಳಾ ಆರಕ್ಷಕ ಪೇದೆ ಹಾಗೂ ಪುರುಷ ಆರಕ್ಷಕ ಪೇದೆ ಬಂದಿದ್ದರು . ಅವರನ್ನು ಬಿಟ್ಟು ಬೇರೆ ಯಾರೂ ಅವರ ಜೊತೆ ಇರಲಿಲ್ಲ. ಹೇಳಿಕೆಯನ್ನು ನನ್ನ ಮಗಳಿಂದ ಮಹಿಳಾ ಪೊಲೀಸ್ ಪಡೆದರು . ಆ ಹೇಳಿಕೆಯನ್ನು ಅವರು ಪಡೆಯುವಾಗ ಅದನ್ನು ಅವರ ಜೊತೆ ಇದ್ದ ಪುರುಷ ಪೊಲೀಸ್ ಬರೆದುಕೊಂಡರು. ನನ್ನ ಮಗಳ ಹೇಳಿಕೆ ಪಡೆದ ಮಹಿಳಾ ಪೊಲೀಸ್ ನನ್ನ ಮಗಳಿಗೆ ಕನ್ನಡದಲ್ಲಿ ಪ್ರಶ್ನೆ ಮಾಡುತ್ತಿದ್ದರು . ನನ್ನ ಮೃತ ಮಗಳು ಕನ್ನಡದಲ್ಲಿ ಆಗ ಉತ್ತರ ನೀಡಿದಳು . ಆ ಹೇಳಿಕೆ ಪ್ರಶ್ನೆ ಮತ್ತು ಉತ್ತರದ ರೂಪದಲ್ಲಿ ಇದೆ ಎಂದರೆ ಹೌದು .

9. ನನ್ನ ಮಗಳು ಶಬ್ರಿನ್ ಆರೋಪಿ ಬಗ್ಗೆ ಆಗಲಿ ಅಥವಾ ಆ ಮನೆಯಲ್ಲಿ ಇದ್ದ ಬೇರೆಯವರ ಬಗ್ಗೆಯಾಗಲಿ ಯಾವುದೇ ವಿಚಾರವನ್ನು ನನ್ನ ಬಳಿ ಹೇಳುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಮೃತ ಮಗಳು ಆಕೆ ಸಾಯುವುದಕ್ಕೆ ಮೊದಲು ಆರೋಪಿ ವಿರುದ್ಧ ಯಾವುದೇ ವಿಚಾರ ಹೇಳಿಲ್ಲ ಎಂದರೆ ಸರಿಯಲ್ಲ. ನಾನು ವಿನಾಃಕಾರಣ ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಘಟನೆ ಬಗ್ಗೆ ಪೊಲೀಸ್ ಠಾಣೆಯಲ್ಲಿ ಚಾಸಾ-1 ದೂರನ್ನು ನೀಡಿದ್ದಾರೆ . ನಾನು ಚಾಸಾ-1 ರವರಿಗೆ ದೂರನ್ನು ಕೊಡುವಂತೆ ನನ್ನ ಅಳಿಯ ಚಾಸಾ-16 ಹೇಳಿರುತ್ತಾರೆ ಮತ್ತು ನಾನೂ ಸಹ ಹೇಳಿರುತ್ತೇನೆ. ದೂರನ್ನು ಚಾಸಾ-1 ನೀಡಿದಾಗ ನಾನು ಹೊನ್ನಾವರದಲ್ಲಿ ಇರಲಿಲ್ಲ ನಾನು ಆಗ ಯಲ್ಲಾಪುರದಲ್ಲಿ ಇದ್ದೆ. ಚಾಸಾ-1 ರವರಿಗೆ ನಾನು ದೂರವಾಣಿ ಕರೆ ಮಾಡಿ ದೂರು ಕೊಡುವಂತೆ ಹೇಳಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದ್ದೇನೆ ಮತ್ತು ನನ್ನ ಅಳಿಯ ಚಾಸಾ-16 ಸಹ ಹೇಳಿದ್ದಾರೆ . ಚಾಸಾ-16 ನನ್ನ ಹೆಂಡತಿಯ ಅಣ್ಣ ಆಗಿರುತ್ತಾನೆ . ನಮ್ಮಲ್ಲಿ ಹೆಂಡತಿಯ ಅಣ್ಣನಿಗೆ ಸಹ ಅಳಿಯ ಎಂದು ಸಂಬೋಧಿಸುತ್ತೇವೆ .

10. ಕೆಎಂಸಿ ಆಸ್ಪತ್ರೆಯಲ್ಲಿ ನನ್ನ ಮಗಳ ಹೇಳಿಕೆ ನಿ.ಪಿ. 21 ರ ಪ್ರಕಾರ ಪಡೆದಾಗ ಅದಕ್ಕೆ ನಾನು ರುಜು ಮಾಡಿದ್ದೇನೆ. ಚಾಸಾ-13 ಮತ್ತು ಚಾಸಾ-14 ಸಹ ಸಹಿ ಮಾಡಿದ್ದಾರೆ . ನನ್ನ ಹೆಂಡತಿ ಸಹ ಸಹಿ ಮಾಡಿದ್ದಾಳೆ . ನಮ್ಮನ್ನು ಬಿಟ್ಟರೆ ಬೇರೆ ಯಾರೂ ಸಹಿ ಮಾಡಿಲ್ಲ. ನನ್ನ

ಮಗಳು ಶಬ್ರಿನ್ ನಿಂದ ಎಡಗೈ ಹೆಬ್ಬೆರಳಿನ ಗುರುತನ್ನು ಹೇಳಿಕೆಗೆ ಪಡೆದರು . ನಿ.ಪಿ. 21 ಹೇಳಿಕೆ ಬಿಟ್ಟು ಬೇರೆ ಹೇಳಿಕೆಯನ್ನು ನನ್ನ ಮಗಳು ಶಬ್ರಿನ್‌ಳದಿಂದ ಪೊಲೀಸ್ ನವರು ಪಡೆದಿಲ್ಲ. ಚಿಕಿತ್ಸೆ ಕಾಲದಲ್ಲಿ ನನ್ನ ಮಗಳು ಶಬ್ರಿನ್ ಪದೇ ಪದೇ ಚೇತರಿಸಿಕೊಳ್ಳುತ್ತಿದ್ದಳು ಎಂದರೆ ಸರಿಯಲ್ಲ ಆಕೆ ಆರಾಮವಾಗಿ ಮಲಗಿಕೊಂಡಿದ್ದಳು ಮತ್ತು ಮಾತನಾಡುತ್ತಿದ್ದಳು . ಆಕೆಗೆ ತಲೆ ಸುಟ್ಟಿದ್ದರಿಂದ ಆಕೆಗೆ ಜ್ಞಾನ ಇರಲಿಲ್ಲ ಎಂದರೆ ಸರಿಯಲ್ಲ.

(ಈ ಹಂತದಲ್ಲಿ 2.00 ಗಂಟೆಯಾಗಿದ್ದರಿಂದ 2.45 ಗಂಟೆಗೆ ಮುಂದುವರಿದ ಪಾಟೀ ಸವಾಲನ್ನು ಮುಂದೂಡಲಾಯಿತು ).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ

ಸಾಕ್ಷಿಯನ್ನು ಪುನಃ 2.55 ಗಂಟೆಗೆ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು .

**ಮುಂದುವರಿದ ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಸ್ ಬಿ ಎಸ್ ರವರಿಂದ**

11. ರಾತ್ರಿ 8.30 ಗಂಟೆ ಸಮಯದಲ್ಲಿ ಪೊಲೀಸ್ ನವರು ನನ್ನ ಮಗಳು ಮೃತ ಶಬ್ರಿನ್ ಳ ಹೇಳಿಕೆಯನ್ನು ಕೆಎಂಸಿ ಆಸ್ಪತ್ರೆಯಲ್ಲಿ ಪಡೆದಿದ್ದಾರೆ . ಆಗ ವೈದ್ಯರೂ ಸಹ ಇದ್ದರು ಎಂದು ಸಾಕ್ಷಿ ಸ್ವತಃ ನುಡಿದಿರುತ್ತಾರೆ . ಎರಡರಿಂದ ಎರಡುವರೆ ತಾಸು ಕಾಲ ಆಕೆಯ ಹೇಳಿಕೆಯನ್ನು ಮಾಡಿಕೊಂಡರು . ಎಷ್ಟು ಪ್ರಶ್ನೆಗಳನ್ನು ಪೊಲೀಸ್ ನವರು ಕೇಳಿದರು ಎಂದರೆ ಬಹಳ ಪ್ರಶ್ನೆಗಳನ್ನು ಕೇಳಿದರು . ಆಕೆ ಎಲ್ಲಾ ಪ್ರಶ್ನೆಗಳಿಗೆ ಉತ್ತರ ನೀಡಿದಳು . ಆ ಸಮಯದಲ್ಲಿ ನನ್ನ ಕುಟುಂಬದವರನ್ನು ಬಿಟ್ಟರೆ ಬೇರೆಯವರು ಇದ್ದರಾ ಎಂದರೆ ವೈದರು ಇದ್ದರು . ಮತ್ತೆ ಯಾರೂ ಇರಲಿಲ್ಲ. ಚಾಸಾ-8 ನನ್ನ ಮಗಳು ಮೃತಪಟ್ಟ ಮೇಲೆ ಬಂದಳು . ಆಕೆ ಜೊತೆ

ಆಕೆಯ ಕುಟುಂಬದವರು 4 ಜನ ಬಂದಿದ್ದರು. ಅವರ ಪೈಕಿ ನನ್ನ 3 ನೇ ಅಳಿಯನ ಹೆಂಡತಿಯ ಅಪ್ಪ , ಅಮ್ಮ ಹಾಗೂ ಮತ್ತೊಬ್ಬರು ಯಾರೋ ಬಂದಿದ್ದರು . ಅವರ ಹೆಸರು ನನಗೆ ನೆನಪಿಲ್ಲ. ನನ್ನ ಮಗಳು ಮೃತಪಟ್ಟ ಬಗ್ಗೆ ಚಾಸಾ−19 ಮಾಹಿತಿಯನ್ನು ಚಾಸಾ−8 ರವರಿಗೆ ನೀಡಿರುತ್ತಾರೆ . ಚಾಸಾ−8 ಆಗ ಬಂದಾಗ ಶವ ಸಂಸ್ಕಾರ ಮುಗಿಸಿಕೊಂಡು ಕೂಡಲೇ ವಾಪಸ್ಸು ಹೋದರು. ಆಕೆ ಜೊತೆ ಘಟನೆ ಕುರಿತು ಆ ಸಮಯದಲ್ಲಿ ಚರ್ಚೆಯಾಯಿತು . ಹೇಗೆ ಆಯಿತು ಎಂದೆಲ್ಲಾ ಚಾಸಾ−19 ಮೃತಳ ಗಂಡ ಕೇಳಿದ . ಆ ಚರ್ಚೆ ಸಮಯದಲ್ಲಿ ನಾನು ಅಲ್ಲಿ ಹಾಜರು ಇರಲಿಲ್ಲ. ಚಾಸಾ−19 ಆ ಚರ್ಚೆ ಬಗ್ಗೆ ಹೇಳಿದ್ದರಿಂದ ನನಗೆ ಗೊತ್ತಾಯಿತು . ಚಾಸಾ−8 ಘಟನೆಯಾದಾಗ ಘಟನೆ ಸ್ಥಳದಲ್ಲಿ ಇದ್ದಳು ಎಂದರೆ ಆಕೆ ನಡಿಗೆಗೆ ( walking) ಹೋಗಿದ್ದಳು ಎಂದು ತಿಳಿಯಿತು . ಘಟನೆ ಕುರಿತು ಸುಳ್ಳು ಕಥೆಯನ್ನು ಸೃಷ್ಟಿ ಆರೋಪಿ ಮೇಲೆ ಸುಳ್ಳು ಕೇಸು ಹಾಕಿದ್ದೇನೆ ಎಂದರೆ ಸರಿಯಲ್ಲ. ಪೊಲೀಸ್ ನವರ ಜೊತೆ ಕೂಡಿಕೊಂಡು ಮರಣೋನ್ಮುಖ ಹೇಳಿಕೆಯನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ಘಟನೆಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ಮಗಳು ಆಕೆಗೆ ಸ್ವತಃ ಸೀಮೆಎಣ್ಣೆ ಸುರಿದುಕೊಂಡು ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದರೆ ಸರಿಯಲ್ಲ. ಆಕೆ ಸಾಯುವವರೆಗೆ ಆರೋಪಿಯೇ ಆಕೆಯನ್ನು ಸುಟ್ಟಿದ್ದಾಗಿ ಹೇಳಿದ್ದಾಳೆ ಎಂದು ಸಾಕ್ಷಿ ನುಡಿದಿರುತ್ತಾರೆ . ಆಕೆ ಆತ್ಮಹತ್ಯೆ ಮಾಡಿಕೊಂಡಿಲ್ಲ ಎಂಬುದು ಕೇವಲ ಆಕೆಯ ಬೆನ್ನು ಮಾತ್ರ ಸುಟ್ಟಿದ್ದರಿಂದ ಗೊತ್ತಾಗುತ್ತದೆ ಎದೆ ಹೊಟ್ಟೆ ಭಾಗ ಆಕೆಗೆ ಸುಟ್ಟಿರಲಿಲ್ಲ ಎಂಬುದರಿಂದ ಗೊತ್ತಾಗುತ್ತದೆ ಎಂದು ಸಾಕ್ಷಿ ಸ್ವತಃ ನುಡಿದಿರುತ್ತಾರೆ . ಘಟನೆ ಸಮಯದಲ್ಲಿ ನನ್ನ ಮೃತ ಮಗಳು ಇದ್ದ ಕೊಠಡಿಯ ಬಾಗಿಲಿಗೆ ಒಳಗಿನಿಂದ ಚಿಲಕ ಹಾಕಿಕೊಳ್ಳಲಾಗಿತ್ತು ಎಂದರೆ ಸರಿಯಲ್ಲ. ಆಕೆಯನ್ನು ತೆಗೆಯುವಾಗ ಬಾಗಿಲನ್ನು ಮುರಿದು ಆಕೆಯನ್ನು ಹೊರಗೆ ತೆಗೆದಿದ್ದಾರೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಅಭಿಯೋಜಕರು ಮುಂದುವರಿದ ಮುಖ್ಯ ವಿಚಾರಣೆಗೆ ಸಾಕ್ಷಿಯ ಸಹಿಯನ್ನು ಶವ ಪಂಚನಾಮೆಯ ಹೇಳಿಕೆಯಲ್ಲಿ ಗುರುತಿಸುವ ಬಗ್ಗೆ ಅನುಮತಿ ಕೋರಿರುತ್ತಾರೆ . ಅನುಮತಿ ನೀಡಲಾಗಿದೆ .**

**ಮುಂದುವರಿದ ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

12. ಈಗ ತೋರಿಸಿದ ನಿ.ಪಿ. 14 ಶವ ತನಿಖಾ ಮಹಜರ್ ನಲ್ಲಿ ಲಗತ್ತಿಸಿರುವ ನನ್ನ ಹೆಂಡತಿಯ ಹೇಳಿಕೆಯಲ್ಲಿ ನನ್ನ ರುಜು ಇದೆ . ಸಾಕ್ಷಿ ಮೊದಲಿಗೆ ತನ್ನ ರುಜುವನ್ನು ಶವ ಪಂಚನಾಮೆ ಹೇಳಿಕೆಗೆ ಹಾಕಿಲ್ಲ ಎಂದು ಹೇಳಿದ್ದು ಆ ರುಜುವನ್ನು ಅಭಿಯೋಜಕರು ತೋರಿಸಿದ ಮೇಲೆ ಅದು ತನ್ನ ರುಜು ಎಂದು ಗುರುತಿಸಿದ್ದಾರೆ . ಸಾಕ್ಷಿಯ ರುಜುವನ್ನು ನಿ.ಪಿ. 14(ಎ) ಎಂದು ಗುರುತಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಸ್ ಬಿ ಎಸ್ ರವರಿಂದ ಏನೂ ಇಲ್ಲ ಎಂದು ಹೇಳಿದ್ದಾರೆ .**

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ